# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.223-2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು ವಾಸ್ತವ್ಯ | ಎಂ.ಮಾದಯ್ಯ ಉ ಮುದ್ದಯ್ಯ, ಉ ಮುದ್ದು ಮಾದಯ್ಯ<br>ಅಳಗಂಚಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-07-2023. |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಹೆಚ್.ಪಿ.ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನನ್ನ ತಂದೆಯವರ ಹೆಸರು ಮಾದಯ್ಯ ಉ ದೇವರಗುಡ್ಡ, ನನ್ನ ತಾಯಿಯವರ ಹೆಸರು ಮಾದಮ್ಮ. ನನ್ನ ತಾತನವರ ಹೆಸರು ಉರಗನಮಾದದೇವರಗುಡ್ಡ. ನನ್ನ ಅಜ್ಜಿಯವರ ಹೆಸರು ಮಾದಮ್ಮ ಉ ಚಿಕ್ಕಮ್ಮ. ನನ್ನ ಅಜ್ಜಿಯವರು ಸರ್ವೆ ನಂ.135 ರ ಒಟ್ಟು ವಿಸ್ತೀರ್ಣ 5 ಎಕರೆ 17 ಪೈಕಿ 1.14 ಗುಂಟೆ ಜಮೀನನ್ನು ದಿ.21-11-1981 ರಂದು ನೋಂದಣಿ ಮರಣ ಶಾಸನದ ಮುಖೇನ ನನಗೆ ನೀಡಿರುತ್ತಾರೆ ಎಂದು ತಿಳಿಸಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಮರಣ ಶಾಸನವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.135 ರಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಯನ್ನು ಮತ್ತು ಕಂದಾಯದ ರಶೀದಿಯನ್ನು ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ದಾಖಲೆಗಳನ್ನಾಗಲಿ ಕಂದಾಯದ ರಶೀದಿಯನ್ನಾಗಲಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಈ ದಾವೆಯನ್ನು ಸಲ್ಲಿಸಿದಾಗ ನನ್ನ ತಾಯಿಯವರು ಜೀವಂತ ಇದ್ದರು. 3 ರಿಂದ 6 ನೇ ಪ್ರತಿವಾದಿಗಳು ನನ್ನ ಖಾಸಾ ಸಹೋದರರು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಸಹೋದರ 4 ನೇ ಪ್ರತಿವಾದಿಯ ಪತ್ನಿ ಎಂದರೆ ಸರಿ. ನನ್ನ ತಾಯಿಯವರು ಅವರ ಜೀವಿತಾವಾಧಿಯಲ್ಲಿ 4 ನೇ ಪ್ರತಿವಾದಿಯವರೊಂದಿಗೆ ವಾಸವಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ, ನನ್ನ ತಾಯಿಯವರು 4 ನೇ ಪ್ರತಿವಾದಿ ರವರ ಮನೆಯಲ್ಲಿ ಮಲಗುತ್ತಿದ್ದು, ಅದರೆ ಎಲ್ಲರ ಮನೆಗೂ ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯವರು 4 ನೇ ಪ್ರತಿವಾದಿಯವರ ಮನೆಯಲ್ಲಿಯೇ ವಾಸವಿದ್ದು ನಮ್ಮಗಳ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯವರ ಜೀವಿತ ಕಾಲದಲ್ಲಿ ಅವರ ಲಾಲನೆ ಪೋಷಣೆಯನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ತಾಯಿಯವರ ಲಾಲನೆ ಪೋಷಣೆ ಮಾಡುತ್ತಿರಲಿಲ್ಲವಾದ ಕಾರಣ ಅವರು 4 ನೇ ಪ್ರತಿವಾದಿ ರವರ ಮನೆಯಲ್ಲಿಯೇ ವಾಸವಿದ್ದರು ಎಂದರೆ ಸರಿಯಲ್ಲ.

3. ದಿ.26-11-2016 ರಂದು ಪಂಚಾಯ್ತಿಯಲ್ಲಿ ಆದ ಮಾತುಕತೆ ಪ್ರಕಾರವಾಗಿ ನಾನು ಸರ್ವೆ ನಂ.135 ರ ವಿಸ್ತೀರ್ಣ 0.14 ಗುಂಟೆ ಸ್ವತ್ತನ್ನು ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯ್ತಿದಾರರ ಸಮಕ್ಷಮ ಆದ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳುವಂತೆ ಯಾವುದೇ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ ವಿಭಾಗ ಪತರಕ್ಕೆ ಅನುಗುಣವಾಗಿ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಡುವಂತೆ ಅರ್ಜಿ ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅರ್ಜಿ ನೀಡುವಷ್ಟರಲ್ಲಿ ಪ್ರತಿವಾದಿಗಳೇ ನನಗೆ ನೋಟಿಸ್ ಅನ್ನು ನೀಡಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ನನ್ನ ತಂದೆಯವರ ಹೆಸರಿನಲ್ಲಿ ಇತ್ತು. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ ಹೇಗೆ ಬಂತು ಎಂದು ನನಗ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾಯಿಯವರಿಗೆ ಮೂಲತಃ ಅವರ ತಂದೆಯಿಂದ ಬಂದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನನ್ನ ತಾಯಿಯವರ ತಂದೆ ಅವರ ಹೆಸರಿಗೆ ಕ್ರಯ

ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾಯಿಯವರ ಹೆಸರಿನಲ್ಲಿ ಇದ್ದು, ನಂತರ ನನ್ನ ತಾಯಿಯವರು ಅವರ ಲಾಲನೆ ಪೋಷಣೆ ಮಾಡುತ್ತಿದ್ದ 2 ನೇ ಪ್ರತಿವಾದಿ ರವರಿಗೆ ದಾನ ಪತ್ರದ ಮುಖೇನ ನೀಡಿರುತ್ತಾರೆ ಎಂದರೆ ಸರಿಯಲ್ಲ

( ಮುಂದುವರದೆ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**